ಶೆಡ್ಯೂಲ್ 1
ಫಾರಂ ಎ
ಸಾರ್ವಜನಿಕ ಪ್ರಕಟಣೆ

(ಭಾರತೀಯ ಫಾಫರಿಕೆ ಮತ್ತು ದಿವಾಳಿತನ ಮಂಡಳಿಯ (ಸ್ವಯಂಪ್ರೇರಿತ ದಿವಾಳಿ ಪ್ರಕ್ರಿಯೆ) ನಿಬಂಧನೆಗಳು–2017ರ ನಿಬಂಧನೆ 14ರಂತೆ)

ವಟ್ಟಿಕುಟಿ ರೋಬೋಟಿಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮಧ್ಯಸ್ಥಗಾರರ ಗಮನಕ್ಕೆ

ಸಂಬಂಧಿತ ವಿವರಗಳು

1	ಕಾರ್ಪೋರೇಟ್ ವ್ಯಕ್ತಿಯ ಹೆಸರು	ವಟ್ಟಿಕುಟಿ ರೋಬೋಟಿಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
2	ಕಾರ್ಪೋರೇಟ್ ವ್ಯಕ್ತಿಯ ಕಾರ್ಪೋರೇಟ್ ಸ್ಥಾಪನ ದಿನಾಂಕ	11/02/2014
3	ಕಾರ್ಪೋರೇಟ್ ಸಲದರರು ನೋಂದಣಿಯಾದ ಸ್ಥಾಪನೆಯಾದ ಪ್ರಾಧಿಕಾರ	ಕಂಪನಿಗಳ ರಿಜಿಸ್ಟ್ರಾರ್ – ಕರ್ನಾಟಕ, ಬೆಂಗಳೂರು
4	ಕಾರ್ಪೋರೇಟ್ ವ್ಯಕ್ತಿಯ ಕಾರ್ಪೋರೇಟ್ ಗುರುತಿನ ಸಂಖ್ಯೆ / ನಿಯಮಿತ ಹೊಣೆಗಾರಿಕೆ, ಹೊಣೆಗಾರಿಕೆ ಗುರುತು ಸಂಖ್ಯೆ	U52590KA2014FTC073556
5	ಕಾರ್ಪೋರೇಟ್ ವ್ಯಕ್ತಿಯ ನೋಂದಣಿಯಾದ ಕಚೇರಿಯ / ವಿಳಾಸ ಮತ್ತು ಪ್ರಮುಖ ಕಚೇರಿ (ಇದ್ದಲ್ಲಿ)	ಸರ್ವೆ ನಂ. 7(ಪಿ) & 93(ಪಿ), ಎಲೆಕ್ಟ್ರಾನಿಕ್ ಸಿಟಿ, ಹಂತ II, ಕೈಗಾರಿಕಾ ಪ್ರದೇಶ, ಬೇಗೂರು ಹೋಬಳಿ, ಬೆಂಗಳೂರು–560100, ಕರ್ನಾಟಕ.
6	ಕಾರ್ಪೋರೇಟ್ ವ್ಯಕ್ತಿಯ ದಿವಾಳಿತನ ಆರಂಭಗೊಂಡ ದಿನಾಂಕ	ಸೆಪ್ಟೆಂಬರ್ 21, 2022
7	ದಿವಾಳಿ ನಡೆಸುವವರ ಹೆಸರು, ವಿಳಾಸ, ಇಮೇಲ್ ವಿಳಾಸ, ದೂರವಾಣಿ ಸಂಖ್ಯೆ ಮತ್ತು ನೋಂದಣಿ ಸಂಖ್ಯೆ	ಬಿ. ಮಹೇಶ್ ಶೆಣೈ, ಫ್ಲಾಟ್ ಸಂಖ್ಯೆ 102, 1ನೇ ಮಹಡಿ, ಗಂಗೋತ್ರಿ ಪಾರ್ಶ್ವ ಕೃಪಾ, 16ನೇ ಮುಖ್ಯ ರಸ್ತೆ, 4ನೇ 'ಟಿ' ಬ್ಲಾಕ್, ಅಂಪಲ್ ಮಾರ್ಟ್ ಪಕ್ಕದಲ್ಲಿ, ಜಯನಗರ, ಬೆಂಗಳೂರು ದಕ್ಷಿಣ, ಬೆಂಗಳೂರು, ಕರ್ನಾಟಕ–560 041. ಇಮೇಲ್: bmaheshshenoy@gmail.com, (ಮೊ.) : 93412 56531, ಐಬಿಬಿಐ ನೋಂದಣಿ ಸಂಖ್ಯೆ: IBBI/IPA-002/IP-N01069/2020-2021/13478
8	ಹಕ್ಕುಗಳು ಸಲ್ಲಿಸಲು ಕೊನೆಯ ದಿನಾಂಕ	ಅಕ್ಟೋಬರ್ 21, 2022

ಈ ನೋಟೀಸಿನ ಮೂಲಕ ತಿಳಿಸುವುದೇನೆಂದರೆ, ವಟ್ಟಿಕುಟಿ ರೋಬೋಟಿಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಸೆಪ್ಟೆಂಬರ್ 21, 2022 ರಿಂದ ಸ್ವಯಂಪ್ರೇರಿತ ದಿವಾಳಿತನವನ್ನು ಆರಂಭಿಸಿದೆ. ವಟ್ಟಿಕುಟಿ ರೋಬೋಟಿಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಪಾಲುದಾರರು, 21/10/2022ರಂದು ಅಥವಾ ಒಳಗಾಗಿ ತಮ್ಮ ಹಕ್ಕುಗಳ ಪುರಾವೆಗಳನ್ನು ಕ್ರಮ ಸಂ. 7ರಲ್ಲಿ ತಿಳಿಸಲಾಗಿರುವಂತೆ ದಿವಾಳಿ ನಡೆಸುವವರ ವಿಳಾಸಕ್ಕೆ ಸಲ್ಲಿಸಲು ಕೋರಲಾಗುತ್ತಿದೆ, ಹಣಕಾಸಿನ ಸಾಲ ಒದಗಿಸಿದವರು ತಮ್ಮ ಹಕ್ಕುಗಳ ಪುರಾವೆಗಳನ್ನು ಇಲೆಕ್ಟ್ರಾನಿಕ್ ಮಾಧ್ಯಮಗಳ / ಮೂಲಕ ಮಾತ್ರವೇ ಸಲ್ಲಿಸತಕ್ಕದ್ದು, ಇತರ ಎಲ್ಲಾ ಪಾಲುದಾರರು ತಮ್ಮ ಹಕ್ಕುಗಳ ಪುರಾವೆಗಳನ್ನು ವೈಯಕ್ತಿಕವಾಗಿ, ಅಂಚೆ ಅಥವಾ ಇಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಸಲ್ಲಿಸಬಹುದು, ಸುಳ್ಳು ಅಥವಾ ದಾರಿ ತಪ್ಪಿಸುವ ಹಕ್ಕುಗಳ ಪುರಾವೆಗಳನ್ನು ಒದಗಿಸಿದಲ್ಲಿ ಅದು ಶಿಕ್ಷಾರ್ಹವಾಗುತ್ತದೆ.

ಬಿ. ಮಹೇಶ್ ಶೆಣೈ
ಲಿಕ್ವಿಡೇಟರ್, ಐಬಿಬಿಐ ನೋಂದಣಿ ಸಂಖ್ಯೆ
IBBI/IPA-002/IP-N01069/2020-2021/13478
ಎಎಫ್ಎ 12/05/2023ರವರೆಗೆ ಮಾನ್ಯವಾಗಿರುತ್ತದೆ.

ದಿನಾಂಕ: 21/09/2022
ಸ್ಥಳ: ಬೆಂಗಳೂರು.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲದ ಖಾತೆ ಸಂಖ್ಯೆ. ಎಡೆಲ್ವೀಸ್ ಎ.ಆರ್.ಸಿ ಟ್ರಸ್ಟ್ 432/HLAPBAN00145995 1. ಬೂಚಪ್ಪ ಸದಾನಂದ್ 2. ಅಭಿಷೇಕ್ ಸದಾನಂದ್ 3. ಮಂಜುಳಾ ಸದಾನಂದ್	ಸೈಟ್ ಬೇರಿಂಗ್ ನಂ. 32, 33 ಮತ್ತು 34, 20ನೇ ಕ್ರಾಸ್ ಖಾತಾ ನಂ. 34/1ಎ, ಸೈಟ್ ಸಂಖ್ಯೆ 32, 33, 34, 35, 36, 37 ಮತ್ತು 38 ರಿಂದ ಮಾಡಲಾಗಿದೆ, ಬುಚಪ್ಪ ಲೇಔಟ್, ಈಜಿಪುರ, ವಿವೇಕ್ ನಗರ ಪೋಸ್ಟ್, ಬೆಂಗಳೂರು - 560047, ಕರ್ನಾಟಕ, ಪ್ರಸ್ತುತ ಬಿಬಿಎಂಪಿಯ ಮಿತಿಯಲ್ಲಿದೆ ಮತ್ತು ಈ ಭೂಮಿಯ ಎಲ್ಲಾ ಭಾಗಗಳು ಮತ್ತು ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ:- ಆ ಬದಿಯಲ್ಲಿ ನರಸಿಂಹಲು ಆಸ್ತಿ 128 ಅಡಿ; ಪಶ್ಚಿಮದಿಂದ:- ಆ ಬದಿಯಲ್ಲಿ ರಸ್ತೆ, ಆಳತೆ 129 ಅಡಿ; ಉತ್ತರದಿಂದ :- ಆ ಬದಿಯಲ್ಲಿ ಎ. ಮುನಿಯಪ್ಪ ಮತ್ತು ದಿವಂಗತ ಮುನಿಸ್ವಾಮಪ್ಪನವರ ಆಸ್ತಿ ಆಳತೆ 67 ಅಡಿ; ದಕ್ಷಿಣದಿಂದ:- ಆ ಬದಿಯಲ್ಲಿ ಸೈಟ್ ನಂ. 35 54 ಅಡಿ ಮಾಲೀಕರ ಮಾಲೀಕತ್ವದಲ್ಲಿದೆ	30.12.2019	01.09.2022ರಂದಿನಂತೆ ರೂ. 2,88,31,081.82/- (ರೂಪಾಯಿ ಎರಡು ಕೋಟಿ ಎಂಬತ್ತ ಎಂಟು ಲಕ್ಷ ಮೂವತ್ತ ಒಂದು ಸಾವಿರದ ಎಂಬತ್ತ ಒಂದು ಮತ್ತು ಪೈಸೆ ಎಂಬತ್ತ ಎರಡು ಮಾತ್ರ)

ಈ ಮೇಲೆ ಹೆಸರಿಸಲಾದ ಸಾಲಗಾರ (ರು) ಆರ್ಥಿಕ ಶಿಸ್ತು ಮತ್ತು ಸಾಲದ ಖಾತೆಯ ಜವಾಬ್ದಾರಿಯ ಹೊಣೆಯನ್ನು ಸರಿಯಾಗಿ ಪಾಲಿಸದೇ ಇದ್ದುದರಿಂದ ಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳ ಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದ ಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇ ವಿಫಲರಾಗಿದ್ದಾರೆ ಎಂದು ತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರ ಉಪೇಕ್ಷೆ ತೋರಿಸಿದುದ ರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದು ವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನ ಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬ ಸಾಲಗಾರನಿಗೆ (ರಿಗೆ) ಸೂಚನೆಗಳನ್ನು ಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆ ಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆ ಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದ ಬಡ್ಡಿ, ವೆಚ್ಚಗಳು ಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವ ಮೂಲಕ ಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆ ಕಾಲಮ್ ಬಿಯಲ್ಲಿ ನಮೂದಿಸಲಾದ ಅಡವು ಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಅರ್ಹವಾಗಿದೆ ಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವ ಇತರ ಕ್ರಮಗಳನ್ನು ಕೂಡಾತೆಗೆದು ಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: "ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು"

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಎಡೆಲ್ವೀಸ್ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್
(ಟ್ರಸ್ಟಿ ಇ.ಎ.ಆರ್.ಸಿ ಟ್ರಸ್ಟ್ ಎಸ್.ಸಿ - 432)
ಅಧಿಕೃತ ಅಧಿಕಾರಿ

ಸ್ಥಳ : ಬೆಂಗಳೂರು

ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್

kotak
ನೋಂದಾಯಿತ ಕಛೇರಿ: 27 ಬಿಕೆಸಿ, ಸಿ 27, ಜಿ ಬ್ಲಾಕ್, ಬಾಂದ್ರಾ ಕುರ್ಲ ಕಾಂಪ್ಲೆಕ್ಸ್, ಬಾಂದ್ರಾ (ಪೂ), ಮುಂಬೈ–400051
ಶಾಖೆ: ನಂ.60, ಗಾಂಧಿ ಬಜಾರ್ ಮುಖ್ಯ ರಸ್ತೆ, ಬಸವನಗುಡಿ, ಬೆಂಗಳೂರು–560004, ಕರ್ನಾಟಕ

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ

ಕೋಟಕ್ ಮಹೀಂದ್ರ ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳು ಸೆಕ್ಯುರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್ 2002 ನಿಯಮ 8(6)ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರಡಿ ಇ-ಹರಾಜು ಮಾರಾಟ ಸೂಚನೆ.

1. ಈ ಮೂಲಕ ನಿರ್ದಿಷ್ಟವಾಗಿ ಸಾಲಗಾರರು ಮತ್ತು ಜಾಮೀನುದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಕೋಟಕ್ ಬ್ಯಾಂಕ್ ಲಿ. ("ಪೂರಕ ಭದ್ರತಾದಾರರು") ಗೆ ಅಡಮಾನ/ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ಅದನ್ನು ಅಧಿಕೃತ ಅಧಿಕಾರಿಯವರು **04.08.2022**ರಂದು ಸ್ವಾಧೀನ ಪಡಿಸಿಕೊಂಡಿದ್ದು, ಅದನ್ನು "ಎಲ್ಲಿ ಹೇಗಿದೆಯೋ ಹಾಗೇ ಆಧಾರ"ದ ಮೇಲೆ, ಯಾವುದೇ ಅವಲಂಬನೆ ಇಲ್ಲದೇ, ಬ್ಯಾಂಕಿಗೆ ಮೇ ಲೋಟಸ್ ಮೆಡಿಕೇರ್ ಸರ್ವೀಸಸ್ ಪ್ರೈ. ಲಿ. ಮತ್ತು ಇತರರಿಂದ **30.07.2022**ರವರೆಗೆ ಬರಬೇಕಾಗಿರುವ ಬಾಕಿ ಹಣ **ರೂ.86,30,893/-** (ಎಂಭತ್ತಾರು ಲಕ್ಷ ಮೂವತ್ತು ಸಾವಿರದ ಎಂಟುನೂರ ತೊಂಬತ್ತಮೂರು ರೂಪಾಯಿಗಳು ಮಾತ್ರ) ಹಾಗೂ 01.08.2022ರಿಂದ ಮುಂದುವರಿದ ಬಡ್ಡಿ, ವೆಚ್ಚ, ದರಗಳು ಮತ್ತು ಖರ್ಚುಗಳನ್ನು ಪೂರಕ ಭದ್ರತಾದಾರರು ವಸೂಲು ಮಾಡಿಕೊಳ್ಳಲು ಈ ಕೆಳಗೆ ವಿವರಿಸಿರುವ ಆಸ್ತಿಯನ್ನು **28.10.2022**ರಂದು ಇ-ಹರಾಜು ಮೂಲಕ ಮಾರಾಟ ಮಾಡಲಿರುವರು. ಆಸ್ತಿಯ ವಿವರ, ಮೀಸಲು ಬೆಲೆ (ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ) ಮತ್ತು ಅರ್ನೆಸ್ಟ್ ಠೇವಣಿ ಹಣವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಲಾಟ್ ನಂ.	ಮಾರಾಟಕ್ಕಿರುವ ಆಸ್ತಿಯ ವಿವರ	ಮೀಸಲು ಬೆಲೆ	ಇಎಂಡಿ
1.	ಕೃಷಿಯೇತರ ಸ್ಥಿರಾಸ್ತಿಯು ವಾಸಯೋಗ್ಯವಾಗಿ ಪರಿವರ್ತಿತವಾಗಿದ್ದು, ಸೈಟ್ ನಂ. 28 (ಅರ್ಧ ಭಾಗ), ಸರ್ವೆ ನಂ. 58, ಜರಕಬಂಡೆಕಾವಲ್ ಗ್ರಾಮ, ರಾಮಚಂದ್ರಪುರ ಮುನ್ಸಿಪಲ್/ ಗ್ರಾಮ, ಎಂ ಎಸ್ ಪಾಳ್ಯ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲೂಕು ಈಗ ಬಿಬಿಎಂಪಿ ಪಿಐಡಿ ನಂ. 011–ಡಬ್ಲ್ಯು0112–41, ಎಂ ಎಸ್ ಪಾಳ್ಯ ಟೀಚರ್ಸ್ ಲೇಔಟ್, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು ಇಲ್ಲಿದ್ದು, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 55ಅಡಿ, ಒಟ್ಟು ವಿಸ್ತೀರ್ಣ1650ಚದರ ಅಡಿ ಹಾಗೂ ಚಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ.29, ಪಶ್ಚಿಮಕ್ಕೆ: ಸೈಟ್ ನಂ. 28ರ ಉಳಿದ ಭಾಗ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಆಸ್ತಿ. ಒಟ್ಟಾಗಿ ಹಾಲಿ ಇರುವ ಕಟ್ಟಡ, ರಚನೆಗಳು ಇದ್ದು ಕಟ್ಟಡ ಮತ್ತು ರಚನೆಯ/ಯಾವುದೇ ಸಮಯದಲ್ಲಿ ನಿರ್ಮಾಣವಾಗಬೇಕಿರುವುದು/ಅಡಮಾನ ನಂತರ ನಿರ್ಮಾಣವಾಗಿರುವುದು ಎಲ್ಲಾ ಸೇರಿಸುವಿಕೆಗಳು, ಅಳವಡಿಕೆಗಳು ಮತ್ತು ಎಲ್ಲಾ ಪೀಠೋಪಕರಣಗಳು, ಯಂತ್ರೋಪಕರಣಗಳು ಭೂಮಿಯ ಮೇಲ್ಮೈ ಹಾಗೂ ಒಳಭಾಗದಲ್ಲಿ ಶಾಶ್ವತವಾಗಿ ಅಳವಡಿಸಿರುವಂತಹುದು.	ರೂ. 94,87,000/-	ರೂ. 9,48,700/-

ಇ-ಹರಾಜು ಮೂಲಕ ಮಾರಾಟವಾಗಲಿರುವ ಆಸ್ತಿಗಳ ನಿಯಮ ಮತ್ತು ನಿಬಂಧನೆಗಳು: ಆಸ್ತಿಗಳ ಪರಿವೀಕ್ಷಣೆ: ಆಸಕ್ತರು 24.10.2022ರಂದು ಬೆಳಗ್ಗೆ 11.00ರಿಂದ ಮಧ್ಯಾಹ್ನ 3.30ರ ವರೆಗೆ ಪರಿವೀಕ್ಷಿಸಬಹುದಾಗಿದೆ. ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ: 24.10.2022ರಂದು ಸಂಜೆ 5.00ಗಂಟೆ.

1. ಹರಾಜು ಮಾರಾಟವನ್ನು ಆನ್‌ಲೈನ್ ಇ-ಹರಾಜು /ಬಿಡ್ಡಿಂಗ್ ಮೂಲಕ ಕೆಎಂಬಿಎಲ್‌ನ ಅಂಗೀಕೃತ ಸೇವಾ ಪೂರೈಕೆದಾರರಾದ ಮೇ ಆಕ್ಷನ್ ಟೈಗರ್, ಕಚೇರಿ: ಅಹಮದಾಬಾದ್, ಗುಜರಾತ್–380006, ಸಹಾಯವಾಣಿ ಸಂ. : ಶ್ರೀ ಪ್ರವೀಣ್ ಕುಮಾರ್ : 7961200515/9722778828, ಮತ್ತು ಇ-ಮೇಲ್ : sales@AuctionTiger.net, ವೆಬ್‌ಪೋರ್ಟಲ್ www.AuctionTiger.net ಮೂಲಕ ನಡೆಯಲಿದೆ.

2. ಹರಾಜು ಮಾರಾಟವು 28ನೇ ಅಕ್ಟೋಬರ್ 2022 ರಂದು ಬೆಳಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆಯ ಒಳಗಾಗಿ, ಒಂದು ವೇಳೆ ಹರಾಜು ಮುಗಿಯುವ ಕೊನೆಯ 5 ನಿಮಿಷಗಳ ಅವಧಿಯಲ್ಲಿ ಬಿಡ್ ಅಂತಿಮಗೊಂಡರೆ 5 (ಐದು) ನಿಮಿಷಗಳ ಸ್ವಯಂ ವಿಸ್ತರಣೆ ಮೂಲಕ ನಡೆಯಲಿದೆ.

3. ಮೀಸಲು ಬೆಲೆಗಿಂತ ಮೇಲ್ಪಟ್ಟ ಮೊತ್ತವನ್ನು ಬಿಡ್ ಅಧಿಕೃತ ಅಧಿಕಾರಿ (ಎಒ) ಯವರು ನಿಗದಿಪಡಿಸಿದ್ದು, ನಂತರದ ಬಿಡ್ ರೂ.50,000/- (ಐವತ್ತು ಸಾವಿರ ರೂಪಾಯಿಗಳು ಮಾತ್ರ) ದ ದ್ವಿಗುಣಗೊಳ್ಳುವಿಕೆ ಮೂಲಕ ನಂತರದ ಬಿಡ್‌ನ್ನು ಬಿಡ್ಡುದಾರರು ಉತ್ತಮಪಡಿಸಿಕೊಳ್ಳಬಹುದು.

4. ಅಧಿಕೃತ ಅಧಿಕಾರಿಯವರು ನಿಗದಿಪಡಿಸಿದ ಮೀಸಲು ಬೆಲೆಗಿಂತ ಕಡಿಮೆ ದರಕ್ಕೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ. ಬಿಡ್‌ದರರು ಮೀಸಲು ಬೆಲೆಗಿಮತ ಕಡಿಮೆ ದರವನ್ನು ನಮೂದಿಸಿದ್ದರೆ ಅಂತಹ ಬಿಡ್‌ನ್ನು ತಿರಸ್ಕರಿಸಿ, ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

5. ಹರಾಜು / ಮಾರಾಟ ದೃಢೀಕರಣಗೊಂಡ ನಂತರ ಯಶಸ್ವಿ ಬಿಡ್ಡುದಾರರು / ಖರೀದಿದಾರರು ಶೇ 25 ರಷ್ಟು ಬಿಡ್ ಮೊತ್ತ (10% ಇಎಂಡಿ ಸೇರಿದಂತೆ) ವನ್ನು ಅದೇ ದಿನ ಪಾವತಿಸಬೇಕು ಹಾಗೂ ಉಳಿದ ಶೇ 75 ರಷ್ಟನ್ನು 15 ದಿನಗಳ ಒಳಗಾಗಿ, ಇಲ್ಲವೇ ಅಧಿಕೃತ ಅಧಿಕಾರಿಯವರ ವಿವೇಚನೆಗೆ ಬಿಟ್ಟಿರುವಂತೆ ಲಿಖಿತ ಮೂಲಕ ವಿಸ್ತರಣೆಗೆ ಸಹ ಒಪ್ಪಿಕೊಳ್ಳಬಹುದು. ಒಂದು ವೇಳೆ ನಿಗದಿತ ಸಮಯದಲ್ಲಿ ಹಣ ಪಾವತಿಸಲು ತಪ್ಪಿದಲ್ಲಿ ಬಿಡ್ಡುದಾರರು ಈಗಾಗಲೇ ಪಾವತಿಸಿರುವ 25% ಇಎಂಡಿ ಹಣವನ್ನು ಬ್ಯಾಂಕ್ ಮುಟ್ಟುಗೋಲು ಹಾಕಿಕೊಳ್ಳಲಿದೆ. ಒಂದು ವೇಳೆ ಅತೀ ಹೆಚ್ಚು ಬಿಡ್‌ಮಾಡಿದ ಬಿಡ್‌ದಾರರು ಹಣ ಪಾವತಿಸಲು ವಿಫಲವಾದರೆ, 24 ಗಂಟೆಗಳ ಒಳಗಾಗಿ ಅವರ ಪರವಾದ ಬಿಡ್‌ನ್ನು ರದ್ದುಗೊಳಿಸಿ, ನಂತರದ ಅತೀ ಹೆಚ್ಚು ಬಿಡ್‌ದಾರರಿಗೆ ಆಸ್ತಿ ಖರೀದಿಗೆ ಆಫರ್ ನೀಡಲಾಗುವುದು.

6. ಮೇಲೆ ಹೇಳಲಾದ ವೆಬ್‌ಸೈಟ್ ಲಿಂಕ್‌ಗೆ ಭೇಟಿ ನೀಡಿ, ಬಿಡ್ ನಮೂನೆ, ವಿವರವಾದ ನಿಯಮ ಮತ್ತು ನಿಬಂಧನೆಗಳನ್ನು ತಿಳಿದುಕೊಂಡು ಬಿಡ್‌ದಾರರು ಬಿಡ್ ಸಲ್ಲಿಸಲು ಕೋರಲಾಗಿದೆ.

7. ಆನ್‌ಲೈನ್/ಭೌತಿಕವಾಗಿ ಬಿಡ್ ಸಲ್ಲಿಸುವವರು ನಿಗದಿತ ನಮೂನೆಯಲ್ಲೇ ಸಲ್ಲಿಸಬೇಕು ಇತರೆ ಮಾದರಿ/ ಅಪೂರ್ಣ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.

8. ಎಲ್ಲಾ ಬಿಡ್ ದಾಖಲೆಗಳು ಕೆವೈಸಿ ದಾಖಲೆಗಳೊಂದಿಗೆ ಅಂದರೆ (1) ಪ್ಯಾನ್ ಕಾರ್ಡ್ (2) ಆಧಾರ್ ಕಾರ್ಡ್/ಪಾಸ್‌ಪೋರ್ಟ್ (3) ಪ್ರಸಕ್ತ ವಾಸದ ವಿಳಾಸದ ಪುರಾವೆ (4) ಸೂಕ್ತ ಇ-ಮೇಲ್ ವಿಳಾಸ (5) ಸಂಪರ್ಕ ಸಂಖ್ಯೆ (ಮೊಬೈಲ್ ಸಂ.) ಇತ್ಯಾದಿಗಳ ಸ್ಕ್ಯಾನ್ ಪ್ರತಿಯನ್ನು ಒಳಗೊಂಡ, ಡಿಡಿಯನ್ನು "ಕೋಟಕ್ ಮಹೀಂದ್ ಬ್ಯಾಂಕ್ ಲಿ, ಬೆಂಗಳೂರು" ಇಲ್ಲಿ ಪಾವತಿಯಾಗುವಂತೆ ಪಡೆದು ಸಲ್ಲಿಸಬೇಕು.

9. ಉದ್ದೇಶಿತ ಬಿಡ್ಡುದಾರರು ಇಎಂಡಿ ಪಾವತಿಸಿದ ದಾಖಲೆಯ ನಮೂನೆಯನ್ನು ಬ್ಯಾಂಕ್‌ಗೆ ಸಲ್ಲಿಸಬೇಕು.

10. ಉದ್ದೇಶಿತ ಬಿಡ್‌ದಾರರು ಸೂಕ್ತವಾದ ಇ-ಮೇಲ್ ವಿಳಾಸವನ್ನು ಹೊಂದಿರಬೇಕು, ಏಕೆಂದರೆ, ಮುಂದಿನ ಎಲ್ಲಾ ಸಂವಹನಗಳನ್ನು ಅಧಿಕೃತ ಅಧಿಕಾರಿಯವರು ಇ-ಮೇಲ್ ಮೂಲಕವೇ ನಡೆಸಲಿರುವರು.

11. ಉದ್ದೇಶಿತ ಬಿಡ್‌ದಾರರು ಇ-ಹರಾಜಿನಲ್ಲಿ ಭಾಗವಹಿಸುವ ಮೊದಲು ಸೇವಾ ಪೂರೈಕೆದಾರರನ್ನು ಸಂಪರ್ಕಿಸಿ, ಆನ್‌ಲೈನ್/ಖುದ್ದಾಗಿ ಇ-ಹರಾಜಿನಲ್ಲಿ ಪಾಲ್ಗೊಳ್ಳುವ ಬಗ್ಗೆ ತರಬೇತಿಯನ್ನು ಪಡೆದುಕೊಳ್ಳಬಹುದು.

12. ಆದಾಗ್ಯೂ, ಯಾವುದೇರೀತಿಯ ತಾಂತ್ರಿಕ ಲೋಪ/ವಿದ್ಯುತ್ ವೈಫಲ್ಯ ಇತ್ಯಾದಿಗಳಿಗೆ ಅಧಿಕೃತ ಅಧಿಕಾರಿ ಅಥವಾ ಪೂರಕ ಭದ್ರತಾದಾರರು ಜವಾಬ್ದಾರರಾಗಿರುವುದಿಲ್ಲ.

13. ಯಶಸ್ವಿಯಾಗದ ಇಎಂಡಿ ಹಣವನ್ನು ಇ-ಹರಾಜು ಪ್ರಕ್ರಿಯೆ ಮುಗಿದ 7 ಕೆಲಸದ ದಿನಗಳ ಒಳಗಾಗಿ ಹಿಂತಿರುಗಿಸಲಾಗುವುದು

14. ಮಾರಾಟವು ಬ್ಯಾಂಕ್‌ನ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. ಒಂದು ವೇಳೆ ಸಾಲಗಾರರು/ಜಾಮೀನುದಾರರು ಪೂರಕ ಭದ್ರತಾದಾರರಿಗೆ ಸಂಪೂರ್ಣ ಹಣವನ್ನು ಇ-ಹರಾಜಿನ ನಿಗದಿತ ದಿನಾಂಕ ಮತ್ತು ಸಮಯದ ಒಳಗಾಗಿ ಪಾವತಿಸಿದಲ್ಲಿ ಮಾರಾಟವನ್ನು ನಡೆಸಲಾಗುವುದಿಲ್ಲ.

15. ಅಧಿಕೃತ ಅಧಿಕಾರಿಯವರಿಗೆ ತಿಳಿದಿರುವಂತೆ, ಮೇಲಿನ ಆಸ್ತಿಗಳಿಗೆ ಯಾವುದೇ ಪರಭಾರೆ ಇರುವುದಿಲ್ಲ, ಆದಾಗ್ಯೂ, ಉದ್ದೇಶಿತ ಟೆಂಡರ್‌ದಾರರು ತಮ್ಮ ಸ್ವ-ಇಚ್ಛೆಯಿಂದ ಟೈಟಲ್/ಪರಭಾರೆ ಇತ್ಯಾದಿಗಳ ಬಗ್ಗೆ ಸ್ವತಂತ್ರವಾಗಿ ವಿಚಾರಣೆ ನಡೆಸಬಹುದಾಗಿದೆ. ಮಾರಾಟಕ್ಕಿಟ್ಟಿರುವ ಈ ಆಸ್ತಿ ಬಗ್ಗೆ ಯಾವುದೇ ದರ, ಪರಭಾರೆ ಅಥವಾ ಸರ್ಕಾರಕ್ಕೆ ಇನ್ನಿತರೆ ಯಾವುದೇ ಬಾಕಿಗಳಿದ್ದರೆ ಅಧಿಕೃತ ಅಧಿಕಾರಿಗಳು ಅಥವಾ ಬ್ಯಾಂಕ್ ಜವಾಬ್ದಾರಿಯಾಗಿರುವುದಿಲ್ಲ. ಅಧಿಕೃತ ಅಧಿಕಾರಿಯವರಿಗೆ ತಿಳಿದೋ ಅಥವಾ ತಿಳಿಯದೆಯೋ ಪ್ರಸಕ್ತ ಇದ್ದರೆ/ ಮುಂದೆ ಬರಬಹುದಾದ ಯಾವುದೇ ಪರಭಾರೆ ಇದ್ದಲ್ಲಿ, ಅದು ಸೇರಿದಂತೆ ಮಾರಾಟ ನಡೆಸಲಾಗುವುದು.

16. ಯಾವುದೇ ಕಾರಣ ನೀಡದೆ ಅಧಿಕೃತ ಅಧಿಕಾರಿಯವರು ಯಾವುದೇ ಅಥವಾ ಎಲ್ಲಾ ಟೆಂಡರ್/ಟೆಂಡರ್‌ಗಳನ್ನು (ಯಾವುದೇ ಆಸ್ತಿಗೆ) ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಇ-ಹರಾಜನ್ನು ಮುಂದೂಡುವ ಅಥವಾ ರದ್ದುಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

17. ಖರೀದಿದಾರರ ಪರವಾಗಿ ಅಧಿಕೃತ ಅಧಿಕಾರಿಯವರು "ಮಾರಾಟ ಪ್ರಮಾಣಪತ್ರ" ವನ್ನು ನೀಡುತ್ತಾರೆ. ನೋಂದಣಿ ಶುಲ್ಕ, ಮುದ್ರಾಂಕ ಶುಲ್ಕ, ಕನ್ವೇನ್ಸ್, ವ್ಯಾಟ್, ಟಿಡಿಎಸ್, ಜಿಎಸ್‌ಟಿ ಇತ್ಯಾದಿಗಳು ಯಾವುದೇ ಶುಲ್ಕ ಮತ್ತು ವೆಚ್ಚಗಳನ್ನು ಖರೀದಿದಾರರೇ ಭರಿಸಬೇಕು.

18. ಮಾರಾಟವು ಸರ್ಫೇಸಿ ಕಾಯಿದೆ/ನಿಯಮಗಳು 2002ರ ಅನ್ವಯ ಮೇಲೆ ಹೆಸರಿಸಿದ ನಿಯಮ ಮತ್ತು ನಿಬಂಧನೆಗಳಂತೆ ನಡೆಯಲಿದೆ.

19. ಆಸ್ತಿ ಪರಿವೀಕ್ಷಣೆ ಸೇರಿದಂತೆ ಹರಾಜಿನ ಬಗ್ಗೆ ಯಾವುದೇ ಹೆಚ್ಚಿನ ಮಾಹಿತಿಗಾಗಿ ಆಸಕ್ತ ಬಿಡ್‌ದಾರರು ಬ್ಯಾಂಕ್‌ನ ವೆಬ್‌ಸೈಟ್ @www.Kotak.com ಗೆ ಭೇಟಿ ನೀಡಿ ಅಥವಾ ಶ್ರೀ ಶ್ರೀಧರ ಎಸ್ ಇವರನ್ನು, ದೂ: 9916165915 ಮತ್ತು ಶ್ರೀ ಪಿ ಲೋಕೇಶ್, ದೂ: 8951170197 ಇವರನ್ನು ಎಲ್ಲಾ ಕೆಲಸದ ದಿನದಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯ ಒಳಗಾಗಿ ಸಂಪರ್ಕಿಸಬಹುದಾಗಿದೆ

ಸ್ಥಳ: ಬೆಂಗಳೂರು
ದಿನಾಂಕ: 23.09.2022

(ಅಧಿಕೃತ ಅಧಿಕಾರಿ)
ಕೋಟಕ್ ಮಹೀಂದ್ರ ಬ್ಯಾಂಕ್

ವೆಂಕಟಗಿರಿಕೋಟೆ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷ ಅಮರನಾಥ ಭರವಸೆ

ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧ

ದೇವನಹಳ್ಳಿ: ತಾಲೂಕಿನ ವೆಂಕಟಗಿರಿಕೋಟೆ ಗ್ರಾಮ ಪಂಚಾಯಿತಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಗುರುವಾರ ಚುನಾವಣೆ ನಡೆಯಿತು. ನೂತನ ಅಧ್ಯಕ್ಷರಾಗಿ ಅಮರನಾಥ ಅವರು ಚುನಾಯಿತರಾದರು ಮತ್ತು ಮುನಿರತ್ನಮ್ಮ ಅವರು ಉಪಾಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದರು.

ವೆಂಕಟಗಿರಿಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲ ಗ್ರಾಮಗಳಿಗೂ ಕುಡಿಯುವ ನೀರು, ಚರಂಡಿ, ಬೀದಿ ದೀಪ, ರಸ್ತೆ, ಸೇರಿದಂತೆ ಎಲ್ಲ ವರ್ಗದ ಬಡವರ ಏಳಿಗೆಗೆ ಪಕ್ಷ, ಭೇದ ಮರೆತು ಗ್ರಾಮಸ್ಥರ ಸೇವೆ ಮಾಡುವುದಾಗಿ ಗ್ರಾಮ ಪಂಚಾಯಿತಿಗೆ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಅಮರನಾಥ್ ಅವರು ತಿಳಿಸಿದರು. ಈ ಸಂದರ್ಭದಲ್ಲಿ ನಿಕಟಪೂರ್ವ ಅಧ್ಯಕ್ಷ ಹುರುಳು ಗುರ್ಕಿ ಶ್ರೀನಿವಾಸ್, ಪಿಡಿಒ ಬಸವನಗೌಡ ಪಾಟೀಲ್, ಸದಸ್ಯರಾದ ಮಾಜಿ ಉಪಾಧ್ಯಕ್ಷೆ ಸುನಂದಾ ಮುನಿರಾಜು, ಹಾಲಿ ಸದಸ್ಯರಾದ ಜೋಸೇಫ್, ಪದ್ಮಾವತಿ, ವಿಶ್ವನಾಥ ಆಚಾರಿ, ಜಗನ್ನಾಥ, ಆಶಾ, ಅನುಸೂಯ, ರೇಖಾ, ಸರೋಜಮ್ಮ, ಗ್ರಾಮಸ್ಥರಾದ ರಮಾಂದ ರೆಡ್ಡಿ, ಲೋಕೇಶ್, ಗೋವಿಂದಪ್ಪ ಕೃಷ್ಣಪ್ಪ ಹಾಜರಿದ್ದರು.

> ಪಂಚಾಯಿತಿಯ ಸದಸ್ಯರು ನನ್ನ ಮೇಲೆ ವಿಶ್ವಾಸವನ್ನು ಇಟ್ಟು 10 ಮತ ನೀಡುವ ಮೂಲಕ ಅಭಿವೃದ್ಧಿ ಪರವಾದ ಕೆಲಸ ಮಾಡಲು ನನಗೆ ಜವಾಬ್ದಾರಿ ನೀಡಿದ್ದಾರೆ. ಅವರ ಭರವಸೆಯನ್ನು ಹುಸಿಗೊಳಿಸದೆ ಪ್ರಾಮಾಣಿಕ ಸೇವೆ ಸಲ್ಲಿಸುತ್ತೇನೆ.
>
> ಅಮರನಾಥ ನೂತನ ಅಧ್ಯಕ್ಷ

ವೆಂಕಟಗಿರಿಕೋಟೆ ಗ್ರಾಮ ಪಂಚಾಯಿತಿಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಅಮರನಾಥ್, ಉಪಾಧ್ಯಕ್ಷೆ ಮುನಿರತ್ನಮ್ಮ ಅವರನ್ನು ಮುಖಂಡರು ಅಭಿನಂದಿಸಿದರು.

ಜೆಡಿಎಸ್ ತೊರೆದ ರಾಜಣ್ಣ

ರಾಮನಗರ: ಚನ್ನಪಟ್ಟಣ ತಾಲೂಕಿನ ಹಿರಿಯ ಮುಖಂಡ ಸಿಂಗರಾಜಿಪುರ ರಾಜಣ್ಣ ಜೆಡಿಎಸ್ ಪಕ್ಷವನ್ನು ತೊರೆಯುವುದಾಗಿ ಬುಧವಾರ ಘೋಷಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಸ್ಥಳೀಯ ಜೆಡಿಎಸ್ ಮುಖಂಡರ ಗುಂಪುಗಾರಿಕೆ ಮತ್ತು ಎಚ್.ಡಿ ಕುಮಾರಸ್ವಾಮಿ ಅವರ ಕುಟುಂಬ ರಾಜಕಾರಣಕ್ಕೆ ಬೇಸತ್ತು ಜೆಡಿಎಸ್ ಪಕ್ಷವನ್ನು ತ್ಯಜಿಸುತ್ತಿದ್ದೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜಣ್ಣ ಬೆಂಬಲಿಗರಾದ ಗೋವಿಂದಳ್ಳಿ ಕೃಷ್ಣೇಗೌಡ, ಭೂಹಳ್ಳಿ ಮಹದೇವಯ್ಯ, ಕಲ್ಲಾಪುರ ರಾಜು, ಜಯರಾಮಯ್ಯ, ಮುನೀರ್, ಪುಟ್ಟಸ್ವಾಮಣ್ಣ, ಶಂಕರ್, ಗಂಗಾಧರ್ ಮತ್ತಿತರರು ಇದ್ದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್‌ಗೆ ರಾಜೀನಾಮೆ ಘೋಷಿಸಿದ ಹಿರಿಯ ಮುಖಂಡ ಸಿಂಗರಾಜಿಪುರ ರಾಜಣ್ಣ.

ಪೌರಕಾರ್ಮಿಕರಿಗೆ ದಸರಾ ಬಾಗಿನ

ದೊಡ್ಡಬಳ್ಳಾಪುರ ನಗರ: ನಗರದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಕಾಂಗ್ರೆಸ್ ಸಮಿತಿ ಅಸಂಘಟಿತ ಮಹಿಳಾ ಪೌರ ಕಾರ್ಮಿಕರಿಗೆ ಬಾಗಿನ ನೀಡುವ ಮತ್ತು ಕಾರ್ಯಕರ್ತರ ಸೇರ್ಪಡೆ ಕಾರ್ಯಕ್ರಮವನ್ನು ಆಯೋಜಿಸಿತ್ತು.

11,113 ಪೌರ ಕಾರ್ಮಿಕರನ್ನು ಕಾಯಂ ಮಾಡಿಕೊಳ್ಳುವಂತೆ ಆದೇಶ ಹೊರಡಿಸಿರುವ ಸರಕಾರದ ಕ್ರಮ ಸ್ವಾಗತಾರ್ಹ. ಆದರೆ ರಾಜ್ಯಾದ್ಯಂತ 27,000ಕ್ಕೂ ಹೆಚ್ಚು ಪೌರಕಾರ್ಮಿಕರನ್ನು ಕಾಯಂಗೊಳಿಸಬೇಕು ಎಂಬುದು ಮೂಲ ಬೇಡಿಕೆಯಾಗಿದೆ ಎಂದು ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಹೇಳಿದರು.

ಪೌರಕಾರ್ಮಿಕರಿಗೆ ದಸರಾ ವಿಶೇಷವಾಗಿ ಬಾಗಿನ ನೀಡಿ ಗೌರವಿಸಲಾಯಿತು. ಅಸಂಘಟಿತ ಕಾರ್ಮಿಕರು, ಪೌರ ಕಾರ್ಮಿಕರು ಹಾಗೂ ಕಾಂಗ್ರೆಸ್ ಮುಖಂಡರು ಇದ್ದರು.

ಸಹಕಾರ ಬಂಧುಗಳೇ ಸಂಘ ಸಂಸ್ಥೆಗಳ ಜೀವನಾಡಿ

ಸೂಲಿಬೆಲೆ: ಸಹಕಾರ ಸಂಘ ಸಂಸ್ಥೆಗಳ ಏಳಿಗೆಗೆ ಷೇರುದಾರರೇ ಅಡಿಗಲ್ಲು ಹಾಗೂ ಜೀವನಾಡಿಗಳು ಎಂದು ಸಹಕಾರ ಬ್ಯಾಂಕ್ ಅಧ್ಯಕ್ಷ ಬಿ.ವಿ.ಸತೀಶಗೌಡ ಅಭಿಪ್ರಾಯಪಟ್ಟರು.

ಸೂಲಿಬೆಲೆ ಸಹಕಾರ ಬ್ಯಾಂಕಿನ ಗ್ರೇನೆಜ್ ಕಟ್ಟಡದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 2021–22ನೇ ಸಾಲಿನ 47ನೇ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸಕ್ತ ಸಾಲಿನಲ್ಲಿ 3943 ಜನ ಷೇರುದಾರರನ್ನು ಹೊಂದಿದ್ದು 88.90 ಲಕ್ಷ ಷೇರು ಬಂಡವಾಳವನ್ನು ಹೊಂದಿದೆ. ಸಂಘದಲ್ಲಿ ಮಾರ್ಚ 2021ಕ್ಕೆ 185.94 ಲಕ್ಷ ನಿಧಿ ಇದ್ದ ಮಾರ್ಚ್ 2022ಕ್ಕೆ 210.88 ಲಕ್ಷಗಳಾಗಿರುತ್ತದೆ ಎಂದರು.

ಬ್ಯಾಂಕಿನ ಮಾಜಿ ಅಧ್ಯಕ್ಷ ಬಿ.ಎನ್ ಗೋಪಾಲಗೌಡ ಮಾತನಾಡಿ, ಸಾಲ ಪಡೆದ ಬ್ಯಾಂಕಿನ ಸದಸ್ಯರು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡಿ ಬ್ಯಾಂಕಿನ ಏಳಿಗೆಗೆ ಕೈಜೋಡಿಸಬೇಕು ಹಾಗೂ ಬ್ಯಾಂಕಿನ ಸಾಲ ವಸೂಲಾತಿಯಲ್ಲಿ ಬ್ಯಾಂಕಿನ ಸಿಬ್ಬಂದಿ ವರ್ಗ ಶ್ರಮವಹಿಸಬೇಕು ಎಂದು ಹೇಳಿದರು.

ಸಿಇಒ ಶ್ರೀನಿವಾಸಮೂರ್ತಿ ಜಮಾ ಖರ್ಚು ಹಾಗೂ ವ್ಯಾಪಾರ ತಖ್ತೆ ಓದಿದರು. 2022–23ನೇ ಸಾಲಿನ ಆಯವ್ಯಯ ಪಟ್ಟಿಯನ್ನು 75 ಲಕ್ಷ 30 ಸಾವಿರಕ್ಕೆ ಮಂಡಿಸಿ ಸಭೆಯ ಅನುಮೋದನೆ ಪಡೆದುಕೊಂಡರು.

ಉಪಾಧ್ಯಕ್ಷ ಮುನಿಯಪ್ಪ, ನಿರ್ದೇಶಕರಾದ ಬಿ.ಎ ನಾರಾಯಣಸ್ವಾಮಿ, ಕೆ.ಸಿ.ಮುನಿರಾಜು, ಪಿಳ್ಳೇಗೌಡ, ನಾರಾಯಣಸ್ವಾಮಿ, ನಾರಾಯಣಪ್ಪ, ಮುನಿರಾಜು, ನಂಜಮ್ಮ, ಕೆ.ವಿ ವಿಜಯಲಕ್ಷ್ಮಿ, ಮುನಿಶಾಮಿಗೌಡ, ತಾಪಂ ಮಾಜಿ ಸದಸ್ಯ ಡಾ. ಡಿ.ಟಿ ವೆಂಕಟೇಶ್, ಗ್ರಾಪಂ ಉಪಾಧ್ಯಕ್ಷ ಶಿವರುದ್ರಪ್ಪ, ಚನ್ನಪ್ಪ, ಅರಸನಹಳ್ಳಿ ಶಿವಣ್ಣ, ಮೇಲ್ವಿಚಾರಕ ಎಸ್.ಕೆ ವಸಂತಕುಮಾರ್, ಲೆಕ್ಕಿಗ ನಾಗೇಶ್, ನಗದು ಗುಮಾಸ್ತ ಜಗದೀಶ್, ಪಿಗ್ಮಿ ಮೋಹನ್, ಅಚ್ಚುತಾನಂದರಾವ್, ನಾರಾಯಣಪ್ಪ, ಲೋಕೇಶ್‌ಕುಮಾರ್, ಅನುಪಮ, ಭಾಗ್ಯಲಕ್ಷ್ಮೀ, ಲೀಲಾವತಿ, ಗೋಪಾಲ್, ನರಸಿಂಹಮೂರ್ತಿ ಇದ್ದರು.

ಸೂಲಿಬೆಲೆ ಸಹಕಾರ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರ ಸದಸ್ಯ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಚೆಕ್‌ನ್ನು ಅಧ್ಯಕ್ಷ ಬಿ.ವಿ ಸತೀಶಗೌಡ ವಿತರಿಸಿದರು.

> **ಅಲ್ಪಾವಧಿ ಬೆಳೆ ಸಾಲ ಮತ್ತು ವ್ಯವಸಾಯೇತರ ಸಾಲಗಳು ರೈತ ಸಮುದಾಯದ ಶ್ರೇಯೋಭಿವೃದ್ಧಿಗೆ 578.98 ಲಕ್ಷ ಕೆಸಿಸಿ ಬೆಳೆ ಸಾಲ ನೀಡಲಾಗಿದೆ. ಸಂಘದ ಸ್ವಂತ ಬಂಡವಾಳದಿಂದ 726.70 ಲಕ್ಷ ಸಾಲವನ್ನು ವಿತರಣೆ ಮಾಡಲಾಗಿದೆ. 384.11 ಲಕ್ಷ ಚಿನ್ನಾಭರಣಗಳ ಮೇಲೆ ಸಾಲ ನೀಡಿರುತ್ತೇವೆ.**
>
> **-ಬಿ.ವಿ.ಸತೀಶಗೌಡ ಸಹಕಾರ ಬ್ಯಾಂಕ್ ಅಧ್ಯಕ್ಷ**

ಹಿರಿಯ ಸಿವಿಲ್ ನ್ಯಾಯಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಲಯ ಚಿಕ್ಕನಾಯಕನಹಳ್ಳಿ

ಎಂ.ವಿ.ಸಿ. ಸಂಖ್ಯೆ.1007/2021.

ವಾದಿಗಳು: ಕುಮಾರ, ಬಿನ್. ಲೇಟ್ ಸಿದ್ದಚಾರ್, ವಯಸ್ಸು 52 ವರ್ಷ ವಾಸ: ಲಕ್ಕೇನಹಳ್ಳಿ, ಹುಳಿಯಾರು ಹೋಬಳಿ, ಚಿ.ನಾ.ಹಳ್ಳಿ (ತಾ), ತುಮಕೂರು (ಜಿ).

ವಿರುದ್ಧ

ಪ್ರತಿವಾದಿಗಳು: ಅನಿಲ್ ಕುಮಾರ್, ಬಿನ್. ಶ್ರೀರಾಮಯ್ಯ, ವಯಸ್ಸು 40 ವರ್ಷ, ವಾಸ: ವೈಷ್ಣವಿ ಬ್ಯಾಂಗಲ್ಸ್, 2ನೇ ಕ್ರಾಸ್, ಎಸ್.ಎಸ್.ಐ.ಟಿ, ವಿರುದ್ಧ ತುಮಕೂರು.

ಎದುರುದಾರರಿಗೆ ನೋಟಿಸ್.

ಅರ್ಜಿದಾರರಾದ ಕುಮಾರ ಬಿನ್ ಲೇಟ್ ಸಿದ್ದಚಾರ್ ರವರು ದಿನಾಂಕ 23/09/2020 ರಂದು ಅಪಘಾತವಾಗಿರುತ್ತದೆ. ಎದುರುದಾರರ ವಿರುದ್ಧ ಘನ ನ್ಯಾಯಾಲಯದಲ್ಲಿ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ವಿಚಾರಣೆಯು ದಿನಾಂಕ: 18/10/2022 ರಂದು ಮಾನ್ಯ ನ್ಯಾಯಾಲಯದಲ್ಲಿದ್ದು, ಯಾವುದೇ ತಕರಾರು ಇದ್ದಲ್ಲಿ ಮೇಲ್ಕಂಡ ದಿನಾಂಕದಂದು ಬೆಳಗ್ಗೆ 11.00 ಗಂಟೆಗೆ ಸರಿಯಾಗಿ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಪ್ರಕರಣವನ್ನು ಇತ್ಯರ್ಥ ಮಾಡಲಾಗುವುದು.

ದಿನಾಂಕ: 21/09/2022 ರಂದು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/–ಶಿರಸ್ತೇದಾರರು
ಹಿರಿಯ ಸಿವಿಲ್ ಜಡ್ಜ್‌ರವರ ನ್ಯಾಯಾಲಯ
ಚಿಕ್ಕನಾಯಕನಹಳ್ಳಿ

ರಮೇಶ್‌ಬಾಬು ಹೆಚ್. ಆರ್
ಅಜಿದಾರರ ಪರ ವಕೀಲರು
ಚಿಕ್ಕನಾಯಕನಹಳ್ಳಿ

ಹಿರಿಯ ಸಿವಿಲ್ ನ್ಯಾಯಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಲಯ ಚಿಕ್ಕನಾಯಕನಹಳ್ಳಿ

ಎಂ.ಸಿ.ನಂ.60/2021.

ಅರ್ಜಿದಾರರು: ರಘು.ಟಿ.ಎಂ. ಬಿನ್.ಮಂಜುನಾಥ, ವಯಸ್ಸು 28 ವರ್ಷ, ವಾಸ: ತಿತಿಗೂರವನಪಾಳ್ಯ (ಹಳ್ಳಿ) ಕಸಬಾ ಹೋಬಳಿ, ಚಿ.ನಾ.ಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.

ವಿರುದ್ಧ

ಎದುರುದಾರರು: ವಿ.ಪೂರ್ಣಿಮ. ಬಿನ್.ವೆಂಕಟರಾಜು. ಕೋಂ. ರಘು.ಟಿ.ಎಂ. ವಾಸ ಹುಚ್ಚಪ್ಪನಪಾಳ್ಯ(ಹಳ್ಳಿ) ಹೊಸ್ಕೂರ್, ಬೆಂಗಳೂರು ಉತ್ತರ.

ಎದುರುದಾರರಿಗೆ ನೋಟಿಸ್.

ಅರ್ಜಿದಾರರು ಎದುರುದಾರರ ವಿರುದ್ಧ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯ ವಿಚಾರಣೆಯು ದಿನಾಂಕ 30/09/2022 ರಂದು ಮಾನ್ಯ ನ್ಯಾಯಾಲಯದಲ್ಲಿದ್ದು, ಎದುರುದಾರರಾದ ತಮ್ಮ ಯಾವುದೇ ತಕರಾರು ಇದ್ದಲ್ಲಿ ಮೇಲ್ಕಂಡ ದಿನಾಂಕದಂದು ಬೆಳಗ್ಗೆ 11.00 ಗಂಟೆಗೆ ಸರಿಯಾಗಿ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಪ್ರಕರಣವನ್ನು ಇತ್ಯರ್ಥ ಮಾಡಲಾಗುವುದು.

ದಿನಾಂಕ: 21/09/2022 ರಂದು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/–ಶಿರಸ್ತೇದಾರರು
ಹಿರಿಯ ಸಿವಿಲ್ ಜಡ್ಜ್‌ರವರ ನ್ಯಾಯಾಲಯ
ಚಿಕ್ಕನಾಯಕನಹಳ್ಳಿ

ರಮೇಶ್‌ಬಾಬು ಹೆಚ್. ಆರ್
ಅಜಿದಾರರ ಪರ ವಕೀಲರು
ಚಿಕ್ಕನಾಯಕನಹಳ್ಳಿ

ವಿರಾಮ
ಪ್ರತಿ ಭಾನುವಾರ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, **ಶ್ರೀ. ಬಿ. ರಾಜು ರಾವ್ ಮತ್ತು ಅವರ ಶ್ರೀಮತಿ ಜಿ. ಆರ್. ಸ್ಮಿತ** ಇವರು ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಇವರು ಶ್ರೀಮತಿ.ಎನ್. ಸರೋಜ ಮತ್ತು ಶ್ರೀಮತಿ ಜಿ.ಬಸಮ್ಮ ರವರ ಹೆಸರಿಗೆ ನೇರವೇಸಲ್ಪಟ್ಟಿರುವ ಕ್ರಯ ಪತ್ರದ ದಿನಾಂಕ: 24–02–2010 ದಸ್ತಾವೇಜು ನಂ.5123/ 2009–10, 1ನೇ ಪುಸ್ತಕ, ಸಿಡಿ ನಂ.44ರ ಸ್ವತ್ತು ನಾಗರಭಾವಿ, ಬೆಂಗಳೂರು, ಉಪ ನೋಂದಣಿ ಕಛೇರಿಯಲ್ಲಿ ನೋಂದಣಿಯಾಗಿರುವ ಮೂಲ ಅಸಲಿ ಕ್ರಯ ಪತ್ರವನ್ನು ಕಳೆದುಕೊಂಡಿರುತ್ತಾರೆ. ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಮಲ್ಲತ್ತಹಳ್ಳಿ ಗ್ರಾಮ, ಪ್ರಸ್ತುತ ಬಿ.ಬಿ.ಎಮ್.ಪಿ ವ್ಯಾಪ್ತಿಯಲ್ಲಿ ಬರುವ ಸ್ವತ್ತಿನ ಸೈಟ್ ನಂ.21, ಅಸೆಸ್‌ಮೆಂಟ್ ನಂ.59/7, ಹಳೇ ಸಿ.ಎಮ್.ಸಿ. ಖಾತಾ ನಂ.148, ಹೊಸ ಖಾತಾ ನಂ.24, ರ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿ, ಒಟ್ಟಾರೆ 1200 ಚದರ ಅಡಿಗಳು, ಮತ್ತು ಜೊತೆಗೆ ಕಟ್ಟಡವನ್ನು ಹೊಂದಿರುತ್ತದೆ. ಹಾಗೂ ಈ ಸಂಪೂರ್ಣ ಸ್ವತ್ತಿಗೆ ಚೆಕ್ಕುಬಂದಿ. **ಪೂರ್ವಕ್ಕೆ :** ಸೈಟ್ ನಂ.14, **ಪಶ್ಚಿಮಕ್ಕೆ :** ರಸ್ತೆ, **ಉತ್ತರಕ್ಕೆ :** ಶ್ರೀಮತಿ ವಿಜಯಲಕ್ಷ್ಮಿಯವರಿಗೆ ಸೇರಿದ ಸೈಟ್ ನಂ.20, **ದಕ್ಷಿಣಕ್ಕೆ :** ಸೈಟ್ ನಂ.22.

ಎನ್ ಜಗದೀಶ್ ಕುಮಾರ್, ವಕೀಲರು
ನಂ.276, 2ನೇ ಮಹಡಿ, 1ನೇ ಮುಖ್ಯ ರಸ್ತೆ,
ಚಾಮರಾಜಪೇಟೆ, ಬೆಂಗಳೂರು–560018.

ಕೆನರಾ ಬ್ಯಾಂಕ್ Canara Bank

(ಭಾರತ ಸರ್ಕಾರದ ಒಂದು ಉದ್ಯಮ)
(A Government of India Undertaking)
Together We Can

ಪ್ರಾದೇಶಿಕ ಕಛೇರಿ ಬೆಂಗಳೂರು ಸೆಂಟ್ರಲ್,
ಬೆಂಗಳೂರು–560001.
ದೂರವಾಣಿ : 080 – 2531 0125.

ಚಿನ್ನದ ಒಡವೆಗಳ ಹರಾಜು ಮಾರಾಟ ಪ್ರಕಟಣೆ

ಈ ಕೆಳಗೆ ಉಲ್ಲೇಖಿಸಲಾದ ವ್ಯಕ್ತಿಗಳಿಗೆ ತಿಳಿಸುವುದೇನೆಂದರೆ ಅವರುಗಳು ಸಾಲದ ಖಾತೆಗಳ ಸಾಲವನ್ನು ಪಾವತಿಸಿರುವುದಿಲ್ಲ. ಇವರುಗಳಿಗೆ ರಿಜಿಸ್ಟರ್ಡ್ ಅಂಚೆ ಮೂಲಕ ನೋಟೀಸನ್ನು ಕಳುಹಿಸಲಾಗಿದ್ದು ಅವುಗಳನ್ನು ಇವರು ಸ್ವೀಕರಿಸಿರುತ್ತಾರೆ. ಆದುದರಿಂದ ಇವರುಗಳು ದಿನಾಂಕ 29.09.2022 ರಂದು ಅಥವಾ ಅದರೊಳಗಾಗಿ ಸಾಲದ ಮೊತ್ತವನ್ನು ಹಾಗೂ ಇತರೆ ವೆಚ್ಚಗಳನ್ನು ಪಾವತಿಸಿ ಅಡಮಾನವಿಟ್ಟಿರುವ ಚಿನ್ನದ ಆಭರಣಗಳನ್ನು ಬಿಡಿಸಿಕೊಳ್ಳಬೇಕಾಗಿ ಈ ಮೂಲಕ ತಿಳಿಸಲಾಗಿದೆ. ವಿಫಲರಾದಲ್ಲಿ, ಸಾಲಗಾರರ ಖರ್ಚಿನಲ್ಲಿ ಬ್ಯಾಂಕಿನ ಆಯಾ ಶಾಖೆಯ ಆವರಣದಲ್ಲಿ ಸಾರ್ವಜನಿಕ ಹರಾಜಿನ ಮೂಲಕ ಅಡಮಾನವಿಟ್ಟಿರುವ ಆಭರಣಗಳನ್ನು ದಿನಾಂಕ 30.09.2022 ರಂದು ಸಂಜೆ 3.00 ಗಂಟೆಗೆ ಅಥವಾ ಯಾವುದೇ ಅನುಕೂಲವಾದ ದಿನಾಂಕದಂದು ಮುಂದಿನ ಯಾವ ಸೂಚನೆ ನೀಡದೆ ಬ್ಯಾಂಕಿನ ಸಂಪೂರ್ಣ ತೀರ್ಮಾನದಂತೆ ಅಡಮಾನವಿಟ್ಟಿರುವ ಚಿನ್ನದ ಆಭರಣಗಳನ್ನು ಬ್ಯಾಂಕಿನಿಂದ ಮಾರಾಟ ಮಾಡಲಾಗುವುದು. ಈ ಪ್ರಕಟಣೆ ಸಾಲಗಾರರಿಗೆ ಹಾಗೂ ಸಾಲಗಾರರು ಒಂದು ವೇಳೆ ಮರಣ ಹೊಂದಿದ್ದರೆ ಅವರ ಕಾನೂನುಬದ್ಧ ವಾರಿಸುದಾರರಿಗೆ ಅನ್ವಯಿಸುತ್ತದೆ. ಬ್ಯಾಂಕಿನ ಸ್ಥಾನಿಕ ಶಾಖೆಗೆ ಯಾವುದೇ ನೋಟೀಸನ್ನು ಮತ್ತು ಕಾರಣವನ್ನು ನೀಡದೆ ಹರಾಜನ್ನು ರದ್ದುಗೊಳಿಸುವ/ಮುಂದೂಡುವ ಎಲ್ಲಾ ಹಕ್ಕನ್ನು ಹೊಂದಿರುತ್ತದೆ.

ಕ್ರಸಂ	ಶಾಖೆಯ ಹೆಸರು	ಸಾಲದ ದಿನಾಂಕ	ಚಿನ್ನದ ಸಾಲದ ಸಂಖ್ಯೆ	ಸಾಲಗಾರರ ಹೆಸರು ಮತ್ತು ವಿಳಾಸ	ಒಟ್ಟು ತೂಕ	ಸಂಪರ್ಕ ಸಂಖ್ಯೆ
1	ಚಿಕ್ಕಪೇಟೆ (00406)	24.02.2022	180057737227	ಸುನಿಲ್ ಕುಮಾರ್ ಬಿ.ಎಸ್, ಸತ್ಯನಾರಾಯಣ ಶೆಟ್ಟಿ ಬಿ.ಡಿ ರವರ ಪುತ್ರ, #120, ಎಸ್.ಬಿ.ಎಂ ಕಾಲೋನಿ, ಬೆಂಗಳೂರು–560050.	27.2 ಗ್ರಾಂ	9483530406, 6204271997
2	ಚಿಕ್ಕಪೇಟೆ (00406)	07.10.2020	406608000020	ಜಿ.ವೆಂಕಟೇಶ್, ಲೇಟ್ ಗಂಗಪ್ಪ ರವರ ಪುತ್ರ, #81, 4ನೇ ಕ್ರಾಸ್, 1ನೇ ಮೇನ್, ಜಗಜೀವನರಾಂ ನಗರ, ಪೋಲೀಸ್ ಠಾಣೆ ಹಿಂಭಾಗ, ಬೆಂಗಳೂರು–560018	121.21 ಗ್ರಾಂ	9483530406, 6204271997
3	ಬಿ.ಡಬ್ಲ್ಯು.ಎಸ್.ಎಸ್.ಬಿ (06781)	12.11.2021	128000310640	ವಿಠೋಬಮ್ಮ, 50, ನೆಲ ಮಹಡಿ, 1ನೇ ಕ್ರಾಸ್, ರಾಜಾರೆಡ್ಡಿ ಲೇಔಟ್, ನಾಗಸಂದ್ರ ಪೋಸ್ಟ್, ಬೆಂಗಳೂರು–560073.	59.9 ಗ್ರಾಂ	080-22214760, 7892616033
4	ಬಿ.ಡಬ್ಲ್ಯು.ಎಸ್.ಎಸ್.ಬಿ (06781)	21.12.2021	180041826848		31.8 ಗ್ರಾಂ	080-22214760, 7892616033

ದಿನಾಂಕ : 22.09.2022
ಸ್ಥಳ : ಬೆಂಗಳೂರು

ಶಾಖಾ ವ್ಯವಸ್ಥಾಪಕರು
ಕೆನರಾ ಬ್ಯಾಂಕ್

ಯೋಗ ಸ್ಪರ್ಧೆ: ಜಾನ್ಹವಿ ಆಯ್ಕೆ

ದೊಡ್ಡಬಳ್ಳಾಪುರ ನಗರ: ಕರ್ನಾಟಕ ಸ್ಟೇಟ್ ಅಮೇಚರ್ ಯೋಗ ಹಾಗೂ ಸ್ಪೋರ್ಟ್ಸ್ ಅಸೋಸಿಯೇಷನ್ ಸಹಯೋಗದೊಂದಿಗೆ ಯೋಗ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ ಆಯೋಜನೆ ಮಾಡಿರುವ ಯೋಗ ಸ್ಪರ್ಧೆಯಲ್ಲಿ ಎಂ.ಆರ್ ಜಾನ್ಹವಿ 2ನೇ ಬಾರಿ ಆಯ್ಕೆಯಾಗಿದ್ದಾರೆ. ಇವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಮೇಚರ್ ಯೋಗ ಸಂಸ್ಥೆಯ ಅಧ್ಯಕ್ಷ ಪ್ರೊ ಎಂ ಜಿ. ಅಮರನಾಥ. ನಿಸರ್ಗ ಯೋಗ ಕೇಂದ್ರದ ಅಧ್ಯಕ್ಷ ಹೆಚ್. ರವೀಂದ್ರ, ಕಾರ್ಯದರ್ಶಿ ನಟರಾಜ್, ಖಜಾಂಚಿ ಶ್ಯಾಮ್ ಸುಂದರ್ ಹಾಗೂ ಯೋಗ ಕೇಂದ್ರದ ಶಿಕ್ಷಕರು ಅಭಿನಂದಿಸಿದ್ದಾರೆ

ಸರಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಭೆ

ಹೊಸಕೋಟೆ: ತಾಲೂಕು ಸರಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ನಿವೇಶನದಾರರ ಹಾಗೂ ಸರ್ವ ಸದಸ್ಯರ ಸಭೆ ಹೊಸಕೋಟೆ ಶ್ರೀಕಂಠೇಶ್ವರ ಕಲ್ಯಾಣ ಮಂಟಪದಲ್ಲಿ ಸಂಘದ ಅಧ್ಯಕ್ಷ ಎಂ.ನರೇಶ್ ಅಧ್ಯಕ್ಷತೆಯಲ್ಲಿ ನಡೆಯಿತು.

ಜೆಡಿ ಮುಖಾಂತರ ನಿರ್ಮಿಸಲು ಉದ್ದೇಶಿಸಿರುವ ಗುಂಪು ಮನೆಗಳ ಬಗ್ಗೆ ಮಾಹಿತಿಯನ್ನು ಅವರು ಮಾಹಿತಿ ನಿಡಿದರು. ಸದರಿ ಗುಂಪು ಮನೆಗಳ ನಿರ್ಮಾಣಕ್ಕೆ ಕಾರ್ಯಕ್ಕೆ ಅಗತ್ಯವಾಗಿರುವ ಕರಾರು ಪತ್ರಗಳ ನೋಂದಣಿ ಕಾರ್ಯಕ್ಕೆ ಬೇಕಾಗಿರುವ ಕಾನೂನು ಪ್ರಕ್ರಿಯೆ ಪ್ರಗತಿಯಲ್ಲಿದ್ದು ಮುಗಿದ ತಕ್ಷಣ ಗುಂಪು ಮನೆಗಳ ನಿರ್ಮಾಣ ಕೆಲಸವನ್ನು ಪ್ರಾರಂಭಿಸಲಾಗುವುದು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಪಿ.ರಾಜಣ್ಣ,ನಿರ್ದೇಶಕರಾದ ಬಿ.ಶ್ರೀನಿವಾಸ್, ಆರ್.ಪ್ರಕಾಶ್, ಟಿ.ಹೆಚ್ ವೆಂಕಟರಮಣಪ್ಪ, ಹೆಚ್.ಗೋವಿಂದ್ ರಾಜ್, ಶ್ರೀಕಾಂತ್, ಅಶ್ವಥಮ್ಮ, ಬಿ.ಪುಷ್ಪ, ವನಜಾಕ್ಷಿ, ಎಂ.ಎಲ್ ಶಾಂತಮ್ಮ, ಕೆ.ಆರ್ ಬಾಬು ಇದ್ದರು.

ಹೊಸಕೋಟೆ ತಾಲೂಕು ಸರಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಸರ್ವ ಸದಸ್ಯರ ಸಭೆಯನ್ನು ಸಂಘದ ಅಧ್ಯಕ್ಷ ಎಂ.ನರೇಶ್ ಉದ್ಘಾಟಿಸಿದರು. ಪದಾಧಿಕಾರಿಗಳು ಹಾಜರಿದ್ದರು.